## ಪ್ರಾರ್ಥನೆ

### ವೇದಮಂತ್ರಗಳಿಂದ

**ತೇಜೋಽಸಿ ತೇಜೋ ಮಯಿ ಧೇಹಿ। ವೀರ್ಯಮಸಿ ವೀರ್ಯಂ ಮಯಿ ಧೇಹಿ। ಬಲಮಸಿ ಬಲಂ ಮಯಿ ಧೇಹಿ। ಓಜೋಽಸಿ ಓಜೋ ಮಯಿ ಧೇಹಿ। ಮನ್ಯುರಸಿ ಮನ್ಯುಂ ಮಯಿ ಧೇಹಿ, ಸಹೋಽಸಿ ಸಹೋ ಮಯಿ ಧೇಹಿ ॥** (ಶುಕ್ಲ ಯಜುರ್ವೇದ ಸಂಹಿತಾ, ೧೯.೯)

ಪ್ರಭು! ನೀನು ಅನಂತ ತೇಜಸ್ಸಿನ ಆಗರವಾಗಿರುವೆ. ನನಗೆ ತೇಜಸ್ಸನ್ನು ನೀಡು. ನೀನು ಅನಂತವೀರ್ಯವಂತನಾಗಿರುವೆ. ನನ್ನನ್ನು ವೀರ್ಯವಂತನನ್ನಾಗಿ ಮಾಡು. ನೀನು ಅನಂತ ಶಕ್ತಿಶಾಲಿಯಾಗಿರುವೆ. ನನಗೆ ಶಕ್ತಿಯನ್ನು ನೀಡು. ನೀನು ಅನಂತ ಓಜಸ್ಸಿನ ಆಗರವಾಗಿರುವೆ. ನನಗೆ ಓಜಸ್ಸನ್ನು ನೀಡು. ನೀನು ಅನಂತ ಧೈರ್ಯದ ಆಗರವಾಗಿರುವೆ. ನನಗೆ ಧೈರ್ಯವನ್ನು ಕೊಡು. ನೀನು ಅನಂತ ಸಹನೆಯ ಆಗರ ವಾಗಿರುವೆ, ನನಗೆ ಸಹನೆಯನ್ನು ನೀಡು *(ಓಜಸ್ಸು = ಇಂದ್ರಿಯ ಶಕ್ತಿ, ಸಹಃ=ಮಾನಸಿಕ ಶಕ್ತಿ, ಬಲಂ=ದೇಹಶಕ್ತಿ).*

**ಯಾ ತೇ ರುದ್ರ ಶಿವಾ ತನೂಃ ಶಿವಾ ವಿಶ್ವಹಾ ಭೇಷಜೀ**
**ಶಿವಾ ರುದ್ರಸ್ಯ ಭೇಷಜೀ ತಯಾ ನೋ ಮೃಡ ಜೀವಸೇ**

(ಶುಕ್ಲ ಯಜುರ್ವೇದ ಸಂಹಿತಾ ೧೬.೪೯)

ಓ ಪ್ರಭು, ನಿನ್ನ ಆನಂದದಾಯಕವಾದ ರೂಪವು ನನ್ನೆಲ್ಲ ವ್ಯಾಧಿಗಳನ್ನು ನೋವನ್ನು ನಾಶಮಾಡಲಿ. ನಮ್ಮ ಜೀವನಗಳನ್ನು ಸಂತೋಷಮಯವನ್ನಾಗಿಯೂ ಫಲದಾಯಕವನ್ನಾಗಿಯೂ ಮಾಡಲಿ.

**ವಿಶ್ವಾನಿ ದೇವ ಸವಿತರ್ ದುರಿತಾನಿ ಪರಾಸುವ**
**ಯದ್ಭದ್ರಂ ತನ್ನ ಆಸುವ** (ಶುಕ್ಲ ಯಜುರ್ವೇದ ಸಂಹಿತಾ ೩೦.೩)

ಓ ಪ್ರಭು, ನೀನು ಪ್ರಕಾಶಮಯನಾಗಿದ್ದೀಯೆ. ನನ್ನನ್ನು ಎಲ್ಲ ದುರಿತಗಳಿಂದ ಪಾರುಮಾಡು. ಯಾವುದು ಮಂಗಳಕರವೋ ಅದನ್ನು ನನಗೆ ನೀಡು.

**ಯನ್ಮೇ ಮನಸಾ ವಾಚಾ ಕರ್ಮಣಾ ವಾ ದುಷ್ಕೃತಂ ಕೃತಮ್**
**ತನ್ನ ಇಂದ್ರೋ ವರುಣೋ ಬೃಹಸ್ಪತಿಃ ಸವಿತಾ ಚ**
**ಪುನಂತು ಪುನಃ ಪುನಃ** (ತೈತ್ತಿರೀಯ ಆರಣ್ಯಕ ೧೦.೧.೫೨)

ನಾನು ಯಾವ ಪಾಪವನ್ನು ಕಾಯವಾಚಾಮನಸಾ ಮಾಡಿರುವೆನೋ ಓ ಪ್ರಭು, ನೀನು ಎಲ್ಲ ಶಕ್ತಿಗಳ ಜ್ಞಾನದ ಪರಿಶುದ್ಧತೆಯ ಸ್ವರೂಪನಾಗಿರುವುದರಿಂದ ಅವೆಲ್ಲವನ್ನೂ ಕ್ಷಮಿಸಿ ನನ್ನನ್ನು ಪರಿಶುದ್ಧನನ್ನಾಗಿ ಮಾಡು.

**ಸೋಽಹಮಪಾಪೋ ವಿರಜೋ ನಿರ್ಮುಕ್ತೋ ಮುಕ್ತಕಿಲ್ಬಿಷಃ**
**ನಾಕಸ್ಯ ಪೃಷ್ಠಮಾರುಹ್ಯ ಗಚ್ಛೇದ್ಬ್ರಹ್ಮಸಲೋಕತಾಮ್**

(ತೈತ್ತಿರೀಯ ಆರಣ್ಯಕ ೧೦.೧.೫೨)

ಹೀಗೆ ನಾನು ಎಲ್ಲ ಪಾಪಗಳಿಂದಲೂ ಕೊಳಕುಗಳಿಂದಲೂ ಬಂಧನಗಳಿಂದಲೂ ಕೆಡುಕುಗಳಿಂದಲೂ ಮುಕ್ತನಾಗಿ ಸ್ವರ್ಗಲೋಕಕ್ಕೆ ಏರುವಂತಾಗಲಿ. ಸರ್ವಶಕ್ತನಾದ ಬ್ರಹ್ಮನು ಯಾವ ಲೋಕದಲ್ಲಿರುತ್ತಾನೋ ಆ ಲೋಕವನ್ನು ಹೊಂದುವಂತಾಗಲಿ.

*(ಮಂತ್ರಗಳ ಭಾವಾನುವಾದವನ್ನು ಮಾತ್ರ ಕೊಡಲಾಗಿದೆ –ಸಂ.)*

## ಸೂಕ್ತಿಪ್ರಭ

### ಶಕ್ತಿ

ಪ್ರತಿಯೊಬ್ಬನನ್ನೂ ಈ ಒಂದು ಪ್ರಶ್ನೆಯನ್ನು ಕೇಳುತ್ತೇನೆ – ನೀವು ಬಲಿಷ್ಠರಾಗಿರುವಿರಾ? ನಿಮ್ಮನ್ನು ಬಲಿಷ್ಠರೆಂದು ಭಾವಿಸುವಿರಾ? ಸತ್ಯ ಮಾತ್ರ ಬಲವನ್ನು ನೀಡಬಲ್ಲದೆಂಬುದು ನನಗೆ ಗೊತ್ತಿದೆ... ಭವರೋಗಕ್ಕೆ ಔಷಧವೇ ಶಕ್ತಿ. *–ಸ್ವಾಮಿ ವಿವೇಕಾನಂದ*

ಇದೊಂದು ದೊಡ್ಡ ಸತ್ಯ – ಶಕ್ತಿಯೇ ಜೀವನ, ದುರ್ಬಲತೆಯೇ ಮರಣ, ಶಕ್ತಿಯೇ ಪರಮಾನಂದ, ಅಖಂಡ ಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ. ದುರ್ಬಲತೆಯೇ ಮರಣ. *– ಸ್ವಾಮಿ ವಿವೇಕಾನಂದ*

ಜಯ ಹೊಂದಬೇಕಾದರೆ ಅತ್ಯದ್ಭುತವಾದ ಇಚ್ಛಾಶಕ್ತಿ ಛಲ ಇವುಗಳು ಬೇಕು. 'ಸಾಗರವನ್ನೇ ಕುಡಿಯುತ್ತೇನೆ. ಪರ್ವತಗಳು ಧೂಳಿಧೂಸರವಾಗುವುವು, ನನ್ನ ಇಚ್ಛಾಶಕ್ತಿಯಿಂದ' ಎನ್ನುವವನು ಛಲಗಾರ. ಅಂತಹ ಶಕ್ತಿ ಇರಲಿ, ಅಂತಹ ಶಪಥವಿರಲಿ. ಕಷ್ಟಪಟ್ಟು ಸಾಧನೆ ಮಾಡಿ. ನೀವು ಗುರಿಯನ್ನು ಸೇರಿಯೇ ಸೇರುತ್ತೀರಿ. *– ಸ್ವಾಮಿ ವಿವೇಕಾನಂದ*

ಒಬ್ಬನು ಭಗವಂತನ ಶಕ್ತಿಯಿಂದ ಶಕ್ತಿವಂತನಾಗದಿದ್ದರೆ, ಮಾಯೆಯ ಜಾಲದಿಂದ ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಭಗವಂತನ ಶಕ್ತಿಯಿಂದ ಶಕ್ತಿವಂತರಾಗಿರಿ. *– ಸ್ವಾಮಿ ಬ್ರಹ್ಮಾನಂದ*

ಆತ್ಮಜ್ಞಾನವನ್ನು ಪಡೆದುಕೊಳ್ಳಲು ಸಿಂಹಸದೃಶವಾದ ಶಕ್ತಿಯನ್ನು ಹೊಂದಬೇಕು. *–ಸ್ವಾಮಿ ಶಿವಾನಂದ*

ಪವಿತ್ರತೆಯೇ ಶಕ್ತಿ; ಪವಿತ್ರತೆಯೇ ದೇವರು *–ಸ್ವಾಮಿ ಪ್ರೇಮಾನಂದ*

ಬಲಶಾಲಿಯಾಗು ಓ ನನ್ನ ಪ್ರಿಯ ಬಾಲಕನೆ, ಯಾವ ಕಾರಣದಿಂದಲೂ ಪ್ರಯತ್ನವನ್ನು ನಿಲ್ಲಿಸಬೇಡ. ದುರ್ಬಲನಾಗಿರುವುದು ತಕ್ಕುದಲ್ಲ. ದುರ್ಬಲನಾಗಿರುವವನು ಅಧಃಪತನಕ್ಕೆ ಗುರಿಯಾಗುವನು. ಇದೇ ವಿಶ್ವದ ನಿಯಮ. *– ಸ್ವಾಮಿ ತುರೀಯಾನಂದ*

ನಿನ್ನ ಕರ್ತವ್ಯಗಳನ್ನು ಧೀರನಂತೆ ಮಾಡುತ್ತಾ ಹೋಗು. ಪಾಶ್ಚಾತ್ಯ ದೇಶಗಳು ತಮ್ಮ ಸಮಯದ ಸದುಪಯೋಗವನ್ನು ಮಾಡಿಕೊಳ್ಳುತ್ತವೆ. ಅದರಲ್ಲೇ ಅವರ ಶಕ್ತಿಯ ರಹಸ್ಯ ಅಡಗಿರುವುದು. ನಿನ್ನ ಸಮಯದ ಸದುಪಯೋಗವನ್ನು ನೀನು ಮಾಡಿಕೊಂಡರೆ ಸತ್ಫಲಗಳನ್ನು ಪಡೆಯುವೆ. *–ಸ್ವಾಮಿ ವಿಜ್ಞಾನಾನಂದ*

ನಡೆಯುವುದು ಕಷ್ಟವಾದರೆ ಕಷ್ಟವೇ ನಡೆಯುತ್ತಿರಲಿ. *–ಅನಾಮಿಕ*

ಭೌತಿಕ ಶಕ್ತಿಯು ಎಂದೆಂದಿಗೂ ನಿರಂತರವಾಗಿ ಆಧ್ಯಾತ್ಮಿಕ ಶಕ್ತಿಯ ಪ್ರಭಾವವನ್ನು ಎದುರಿಸಲಾರದು. *– ಫ್ರಾಂಕ್ಲಿನ್ ರೂಸ್‌ವೆಲ್ಟ್*

ಜನರಿಗೆ ಬೇಕಾದುದು ಶಕ್ತಿಯಲ್ಲ, ಸಂಕಲ್ಪ. – ವಿಕ್ಟರ್ ಹ್ಯೂಗೋ

ಮೃದುತ್ವಕ್ಕಿಂತಲೂ ಶಕ್ತಿಶಾಲಿಯಾದುದು ಬೇರೆ ಇಲ್ಲ. ಶಕ್ತಿಶಾಲಿಯಾದುದಕ್ಕಿಂತಲೂ ಮೃದುವಾದದ್ದು ಬೇರೆ ಇಲ್ಲ. *–ಫ್ರಾನ್ಸಿಸ್ ಡೆ. ಸೇಲ್ಸ್*

ನನ್ನ ಯಶಸ್ಸಿನ ಗುಟ್ಟನ್ನು ಹೇಳುತ್ತೇನೆ. ನನ್ನ ಶಕ್ತಿ ಸಂಪೂರ್ಣವಾಗಿ ಇರುವುದು ನನ್ನ ಸತತ ಪ್ರಯತ್ನದಲ್ಲಿ. *– ಲೂಯಿ ಪ್ಯಾಶ್ಚರ್*